ನೀನಾಸಮ್ ಸಂಸ್ಕೃತಿ ಶಿಬಿರ ೨೦೧೯

೬ ರಿಂದ ೧೦
ಅಕ್ಟೋಬರ್ ೨೦೧೯
ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ
ಸ್ವಾಗತ

೬
ಅಕ್ಟೋಬರ್ ಶನಿವಾರ

ನೀನಾಸಮ್ ತಿರುಗಾಟ ತಂಡದ ನಾಟಕ - ಸೇತುಬಂಧನ
ವಿನ್ಯಾಸ: ಮಂಜು ಕೊಡಗು
ರಚನೆ ಮತ್ತು ನಿರ್ದೇಶನ: ಅಕ್ಷರ ಕೆ.ವಿ.

ಅಕ್ಷರ ಕೆ.ವಿ. ಅವರು ರಚಿಸಿದ 'ಸ್ವಯಂವರಲೋಕ'ದಿಂದ ಆರಂಭವಾಗಿ 'ಭಾರತಯಾತ್ರೆ'ಯಲ್ಲಿ ಮುಂದುವರೆದ ನಾಟಕತ್ರಿವಳಿಯ ಕಡೆಯ ಕೃತಿ 'ಸೇತುಬಂಧನ'. ಪಶ್ಚಿಮಘಟ್ಟದ ಒಂದು ನದಿಗೆ ಕಟ್ಟಿದ ಆಣೆಕಟ್ಟಿನಿಂದ ದ್ವೀಪವಾಗಿರುವ ಪುಟ್ಟಿ ಊರೊಂದರಲ್ಲಿ ಜರುಗುವ ಅಸಂಭವನೀಯವಾದ ಜಾಗತಿಕ ಸ್ವಯಂವರದ ಕಥೆಯನ್ನು ಈ ತ್ರಿವಳಿಯ ಮೊದಲ ನಾಟಕ ಕಟ್ಟಿದರೆ, ಮೊದಲ ನಾಟಕದ ಪ್ರಮುಖಪಾತ್ರವೊಂದು ಭಾರತಾದ್ಯಂತ ಓಡಾಡಿ ಕಾಣುವ ಸಮಕಾಲೀನ ಚಿತ್ರಗಳನ್ನು ಎರಡನೆಯ ನಾಟಕವು ಒಳಗೊಂಡಿದೆ.

'ಸೇತುಬಂಧನ' ಆರಂಭವಾಗುವಾಗ, ಭಾರತಯಾತ್ರೆಗೆ ಹೋಗಿದ್ದ ರಾಮಕೃಷ್ಣ ಜೋಯಿಸ ಊರಿಗೆ ಮರಳುತ್ತಾನೆ; ಆದರೆ ಅಷ್ಟರಲ್ಲಿ ಈ ಊರಿಗೆ ಸೇತುವೆಯಾಗುವ ಕೆಲಸ ಆರಂಭವಾಗಿದ್ದು ಅದರಿಂದಾಗಿ ಅಲ್ಲಿಯ ಸಾಮಾಜಿಕ-ರಾಜಕೀಯ ಚಹರೆಗಳೇ ಸಂಪೂರ್ಣ ಬದಲಾಗಿವೆ; ಅದಕ್ಕೆ ಸಮಾನಾಂತರವಾಗಿ ಅವನ ಮನೆಯೂ ಸೇರಿದಂತೆ ಊರಿನ ಜನರ ಮನೋಧರ್ಮವೂ ಬದಲಾಗಿ ಹಲವು ರೀತಿಯ ಹೊಸ ಸಂಘರ್ಷಗಳು ಅಲ್ಲಿ ಉಲ್ಬಣಗೊಂಡಿವೆ. ಈ ನಾಟಕದ ಪ್ರಥಮಾರ್ಧದಲ್ಲಿ ಇಂಥ ಸಂಘರ್ಷಗಳ ಚಿತ್ರಗಳನ್ನು ಕಂಡು ಅರಿಯುತ್ತ ಹೋಗುವ ಆತ, ದ್ವಿತೀಯಾರ್ಧದಲ್ಲಿ, ಅದಕ್ಕೆ ಪ್ರತಿಸ್ಪಂದಿಸುತ್ತ ತನ್ನ ಕಲ್ಪನೆಯ ಹಳ್ಳಿಯೊಂದನ್ನು ಕಟ್ಟುವತ್ತ ಮೊದಲ ಹೆಜ್ಜೆಗಳನ್ನು ಇರಿಸಿ, ಕಡೆಗೆ ಈ ಊರಿನಲ್ಲೇ ನೆಲೆಸಲು ನಿಶ್ಚಯಿಸಿರುವ ಮೂವರು ಎಳೆಯರಿಗೆ ಈ ಜವಾಬ್ದಾರಿಯನ್ನು ವಹಿಸಿ ಮರಣಹೊಂದುವುದು – ಈ ನಾಟಕದ ಕಥಾಹಂದರ. ಸಮಕಾಲೀನ ಜಗತ್ತನ್ನು ಪುರಾಣದ ಪಾತಳಿಯಲ್ಲಿಟ್ಟು ಕಾಣುವ ಮಹತ್ವಾಕಾಂಕ್ಷೆಯೊಂದು ಈ ನಾಟಕದ ಹಿಂದಿದೆ.

ತಿರುಗಾಟ ನಾಟಕ

೭
ಅಕ್ಟೋಬರ್ ಭಾನುವಾರ

ನೀನಾಸಮ್ ತಿರುಗಾಟ ತಂಡದ ನಾಟಕ - ಆಶ್ಚರ್ಯ ಚೂಡಾಮಣಿ
ವಿನ್ಯಾಸ: ಮಂಜು ಕೊಡಗು
ನಿರ್ದೇಶನ: ಜೋಸೆಫ್ ಜಾನ್

ಕ್ರಿ.ಶ. ೮-೯ನೆಯ ಶತಮಾನದ ಸುಮಾರಿಗೆ ರಚಿತವಾಗಿರುವ ಸಂಸ್ಕೃತ ನಾಟಕಕಾರ ಶಕ್ತಿಭದ್ರನ ಈ ನಾಟಕವು ಬಾಲಕಾಂಡವೊಂದನ್ನು ಬಿಟ್ಟು ಉಳಿದಂತೆ ಇಡಿಯ ರಾಮಾಯಣದ ಕಥೆಯನ್ನು ಸಂಗ್ರಹರೂಪದಲ್ಲಿ ಹೇಳಹೊರಟಿದೆ. ಆದರೆ, ವಾಲ್ಮೀಕಿ ರಾಮಾಯಣದ ಕಥನವನ್ನು ಅದು ಪುನರ್‌ರೂಪಿಸಿಕೊಂಡ ವಿಧಾನವೂ ಮತ್ತು ಬಳಸಿರುವ ಕಥನವಿಧಾನವೂ ಅದನ್ನು ಅಪರೂಪದ ಒಂದು ನಾಟಕವಾಗಿಸಿದೆ. ಉದಾಹರಣೆಗೆ, ಈ ನಾಟಕದ ರಾವಣನು ಸನ್ಯಾಸಿ ವೇಷದಲ್ಲಿ ಸೀತಾಪಹರಣ ಮಾಡುವ ಬದಲು ಮಾಯೆಯಿಂದ ರಾಮನದ್ದೇ ವೇಷ ಧರಿಸಿ ಆ ಕೆಲಸ ಮಾಡುತ್ತಾನೆ. ಮಾತ್ರವಲ್ಲ, ಶೂರ್ಪಣಖಿಯನ್ನು ಇನ್ನೊಂದು ಮಾಯಾ ಸೀತೆಯಾಗಿ ಸೃಷ್ಟಿಸಿ ರಾಮನಿಗೆ ಸೀತಾಪಹರಣ ಗೊತ್ತಾಗದಿರುವಂತೆ ಯೋಜಿಸುತ್ತಾನೆ. ಹೀಗೆ, ಹಲವು ಮಾಯೆಗಳಿಂದ ಕೂಡಿದ ನಾಟಕೀಯತೆಯ ಮೂಲಕ ಬೆಳೆಯುತ್ತ ಹೋಗುವ ಈ ಸಂವಿಧಾನವು ಅಂತಿಮವಾಗಿ ಸೀತೆಯಿಂದ ಹನುಮಂತನು ಚೂಡಾಮಣಿಯನ್ನು ತಂದು ಕೊಟ್ಟ ಬಳಿಕ ವಾಸ್ತವದತ್ತ ತಿರುವು ಪಡೆಯುತ್ತದೆ; ಆಗ ರಾಮಾದಿಗಳಿಗೆ ಈ ಮಾಯೆಯ ಮುಸುಕು ಹರಿದು ನಿಜ ಕಾಣತೊಡಗುವುದರಿಂದಲೇ ಅದು ಒಂದು ಸಾದಾ ಆಭರಣವಾಗದೆ ಆಶ್ಚರ್ಯ ಚೂಡಾಮಣಿಯಾಗುತ್ತದೆ. ಆ ಮೂಲಕ ಈ ನಾಟಕವು ಸಾಂಪ್ರದಾಯಿಕ ರಾಮಾಯಣಕ್ಕೆ ಹೊಸದೇ ಆದೊಂದು ವ್ಯಾಖ್ಯಾನವನ್ನೂ ಮಾಡುತ್ತದೆ.

ಕೇರಳದ ಕೂಡಿಯಾಟ್ಟಮ್ ಪ್ರಕಾರದಲ್ಲಿ ಶತಮಾನಗಳಾದ್ಯಂತ ತುಂಬ ಜನಪ್ರಿಯವಾಗಿ ಪ್ರದರ್ಶನಗೊಂಡಿರುವ ಈ ನಾಟಕವನ್ನು ಪ್ರಸ್ತುತ ಪ್ರಯೋಗವು ಸಾಂಪ್ರದಾಯಿಕ ರಂಗಾಂಶಗಳನ್ನು ಆಯ್ದು ಬಳಸುತ್ತಲೇ, ಆಧುನಿಕ ನಾಟ್ಯ ಸಂವೇದನೆಯಿಂದ ಪುನರ್ ರೂಪಿಸುವ ಪ್ರಯೋಗಕ್ಕೆ ಕೈಹಾಕಿದೆ.

ತಿರುಗಾಟ ನಾಟಕ

೮
ಅಕ್ಟೋಬರ್ ಸೋಮವಾರ

ನೀನಾಸಮ್ ತಂಡದ ನಾಟಕ - ಈಡಿಪಸ್
ಕನ್ನಡ ರಂಗರೂಪ ಮತ್ತು ನಿರ್ದೇಶನ:
ಗಣೇಶ್ ಮಂದರ್ತಿ

ಪ್ರಸಿದ್ಧ ಗ್ರೀಕ್ ನಾಟಕಕಾರ ಸೊಫೋಕ್ಲಿಸ್‌ನ ಈ ನಾಟಕವು – ಒಂದು ಅಮೂರ್ತ ಶಕ್ತಿಯು ಜಗತ್ತಿನ ವಿದ್ಯಮಾನಗಳನ್ನು ನಡೆಸುತ್ತದೆ; ಮನುಷ್ಯರು ಈ ಶಕ್ತಿಯ ಕೈಗೊಂಬೆಗಳು – ಎಂಬ ತರ್ಕವನ್ನು ಮೀರಿದ ಸಂಗತಿಯೊಂದನ್ನು ಧ್ವನಿಸುವಂಥದು. ಥೀಬ್ಸ್ ನಗರರಾಜ್ಯದ ದೊರೆ ಈಡಿಪಸ್ ತನ್ನ ನಾಡಿನಲ್ಲಿ ಭೀಕರ ಬರಗಾಲವೊಂದನ್ನು ಎದುರಿಸುತ್ತಿದ್ದಾನೆ, ಮತ್ತು ಈ ಬರಗಾಲದ ಕಾರಣವನ್ನು ಹುಡುಕುತ್ತ ಹೋದಾಗ ಅದು ಎತ್ತೆತ್ತಲೋ ಸುತ್ತಾಡಿ ಕಡೆಗೆ ಸ್ವತಃ ಈಡಿಪಸ್‌ನ ಕೊರಳಿಗೇ ಬಂದು ತಾಗಿಕೊಳ್ಳುತ್ತದೆ. ಪೂರ್ವದೊಂದು ಪ್ರವಾದವು ಮುಂಗಾಣಿಸಿದ ಪ್ರಕಾರವೇ ಈಡಿಪಸ್ ತನ್ನ ತಂದೆಯನ್ನು ಕೊಂದು ತಾಯಿಯನ್ನು ಮದುವೆಯಾಗಿದ್ದಾನೆ; ಮನುಷ್ಯಪ್ರಯತ್ನಗಳನ್ನೆಲ್ಲ ಮೀರಿ ಆ ಭೀಕರ ಭವಿಷ್ಯವಾಣಿ ನಿಜವಾಗಿಬಿಟ್ಟಿದೆ. ಸತ್ಯದ ಇಂಥ ಪ್ರಖರತೆಯನ್ನು ತಡೆದುಕೊಳ್ಳಲಿಕ್ಕಾಗದೆ ಅಂತಿಮವಾಗಿ ರಾಣಿ ಯೊಕಾಸ್ತಾ ಆತ್ಮಹತ್ಯೆಗೆ ಶರಣಾಗುತ್ತಾಳೆ; ರಾಜ ಈಡಿಪಸ್ ಹೊರಗಣ್ಣುಗಳನ್ನು ಕಳೆದುಕೊಂಡು ಒಳಗಣ್ಣಿನ ಬೆಳಕಿಗೆ ಪಲ್ಲಟಗೊಳ್ಳುತ್ತಾನೆ – ಇದು ಕಥಾಹಂದರ. ಆದ್ದರಿಂದಲೇ, ಈ ನಾಟಕವು ಕರ್ಮಸಿದ್ಧಾಂತದ ಮತ್ತು ದುಷ್ಪಶಿಕ್ಷಣ ಶಿಷ್ಟಪರಿಪಾಲನೆಯ ನಮ್ಮ ಪುರಾಣಗಳ ಚೌಕಟ್ಟಿನ್ನು ಮೀರಿ 'ಮನುಷ್ಯರು ಕಾಲಕ್ಕೆ ಬಂದಿಗಳು; ಸರ್ವತಂತ್ರಸ್ವತಂತ್ರರಲ್ಲ; ಆದ್ದರಿಂದಲೇ ಅವರು ಅನುಭವಿಸುವ ಕಷ್ಟಸುಖಗಳಿಗೆ ಕಾರಣವಿರಬೇಕಿಲ್ಲ' ಎಂಬ ಬಗೆಯ ಭಯಾನಕ ತತ್ವದತ್ತ ನಮ್ಮನ್ನು ಕರೆದೊಯ್ಯುತ್ತದೆ. ಪ್ರಸ್ತುತ ಪ್ರಯೋಗವು ಗ್ರೀಕ್ ಮೂಲದ ಈಡಿಪಸ್ ಕೃತಿಯನ್ನು ಅದರ ಶಾಸ್ತ್ರೀಯಬಂಧದಿಂದ ಕಳಚಿ ನಮ್ಮ ನೆಲಕ್ಕೆ ಸ್ಥಳಾಂತರಿಸುವ ಪ್ರಯೋಗಕ್ಕೆ ಹೊರಟಿದೆ.

ನೀನಾಸಮ್ ನಾಟಕ

೯
ಅಕ್ಟೋಬರ್ ಮಂಗಳವಾರ

ಆಹ್ವಾನಿತ ತಮಿಳು ರಂಗಪ್ರಯೋಗ - 'ಪೂಳಿಪ್ಪಾವೈ'
ತಮಿಳುನಾಡಿನ ಮಣಲ್ ಮಗುಡಿ ತಂಡದಿಂದ
ರಚನೆ, ಸಂಗೀತ ಮತ್ತು ನಿರ್ದೇಶನ: ಎಸ್. ಮುರುಗಬೂಪತಿ

ಮಧುರೈ ಸಮೀಪದ ಕೋವಿಲ್‌ಪಟ್ಟಿಯಲ್ಲಿರುವ ಮಣಲ್ ಮಗುಡಿ ನಾಟಕ ತಂಡವು ಕೆಲಸ ಮಾಡುವ ವಿಧಾನ ಮತ್ತು ರೂಪಿಸುವ ರಂಗಪ್ರಯೋಗ ಎರಡೂ ವಿಶಿಷ್ಟ. ದೇಹ-ಧ್ವನಿ, ಪ್ರಾಣಿಚಲನೆ, ಜೀವಜಡ ವಸ್ತು-ಸ್ಥಳಗಳನ್ನು ಹೊಸ ಬಗೆಯಲ್ಲಿ ಅವಿಷ್ಕರಿಸುವ ರಂಗಾಭಿವ್ಯಕ್ತಿಯನ್ನು ಈ ತಂಡ ಕಟ್ಟಿದೆ; ಭಾರತ ಮತ್ತು ಹೊರದೇಶಗಳ ರಂಗೋತ್ಸವಗಳಲ್ಲಿ ಖ್ಯಾತಿಯನ್ನೂ ಗಳಿಸಿದೆ.

'ಪೂಳಿಪ್ಪಾವೈ' ಒಂದು ಜಾನಪದ ವೃತ್ತಾಂತದ ಸುತ್ತ ಹೆಣೆಯಲ್ಪಟ್ಟಿದೆ. ನಲ್ಲತಂಗಳ್ ಎಂಬಾಕೆ ದಾರುಣ ಬವಣೆಗಳಿಂದ ಬೇಸತ್ತು ಏಳು ಹೆಣ್ಣು ಮಕ್ಕಳೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ; ಬಳಿಕ ಮರುಹುಟ್ಟು ಪಡೆದ ಆ ಮಕ್ಕಳೇ ತಮ್ಮ ಕಥೆಗಳನ್ನು ಹೇಳುತ್ತಾರೆ. ಆದರೆ, ಈ ನಾಟಕವು ಆ ಏಳು ಮಕ್ಕಳ ಕಥೆಯನ್ನು ಆದಿಮ ಕಾಲದಿಂದ ಇಂದಿನವರೆಗಿನ ಬೇರೆಬೇರೆ ಕಾಲದೇಶದ ಹೆಣ್ಣುಗಳ ಕಥನದೊಂದಿಗೆ ಕಸಿ ಮಾಡುತ್ತದೆ; ಸಾರ್ವಕಾಲಿಕವಾದ ಬದುಕಿನ ಬವಣೆಗಳ ಒಂದು ರಂಗಕಥನವನ್ನು ಕಟ್ಟುತ್ತ, ಹೆಣ್ಣು ಸಂವೇದನೆಯು ಹೇಗೆ ಇಂಥ ಬವಣೆಗಳಿಗೆ ಭವಿಷ್ಯದ ಮದ್ದಾಗಬಲ್ಲುದು – ಎಂಬ ಹುಡುಕಾಟಕ್ಕೆ ತೊಡಗುತ್ತದೆ.

ಸಾಂಪ್ರದಾಯಿಕವಾದ ಕ್ರಮದಲ್ಲಿ ಸನ್ನಿವೇಶ-ಪಾತ್ರ-ಸಂಭಾಷಣೆಗಳನ್ನಾಧರಿಸಿ ನಾಟಕವನ್ನು ರೂಪಿಸುವ ವಿಧಾನವನ್ನು ಕೈಬಿಡುವ ಈ ಪ್ರಯೋಗವು ಮನುಷ್ಯ ಮತ್ತು ಮನುಷ್ಯೇತರ ಪಾತ್ರಗಳನ್ನೂ ಜಡವಸ್ತುಗಳನ್ನೂ ಕಥನದ ವಾಹಕಗಳಾಗಿ ಬಳಸಿಕೊಳ್ಳುವ ಪ್ರಯೋಗಕ್ಕೆ ಕೈಹಾಕುತ್ತದೆ. ಮತ್ತು ಆ ಮೂಲಕ ಆದಿಮವೂ ಆಧುನಿಕವೂ ಎರಡೂ ಅಲ್ಲದ ಮತ್ತು ಎರಡೂ ಆಗಿರುವ ವಿಶಿಷ್ಟ ರಂಗಸಂವಹನೆಯೊಂದನ್ನು ಕಟ್ಟಲು ಹವಣಿಸುತ್ತದೆ.

ತಮಿಳು ನಾಟಕ

೧೦
ಅಕ್ಟೋಬರ್ ಬುಧವಾರ

ಆಹ್ವಾನಿತ ರಂಗಪ್ರಯೋಗ - 'ಕೊಳ'
ಬೆಂಗಳೂರಿನ ಥೇಟರ್ ತತ್ಕಾಲ್ ತಂಡದಿಂದ
ನಿರ್ದೇಶನ: ಅಚ್ಯುತ ಕುಮಾರ್

ಮರಾಠಿಯ ಪ್ರಸಿದ್ಧ ನಾಟಕಕಾರ ಮಹೇಶ್ ಎಲ್ಕುಂಚವಾರ್ ಅವರು ಬರೆದ 'ವಾಡಾ ಚಿರೇಬಂದಿ', 'ಮಗ್ನಾ ತಾಲಾಕಥಿ' ಮತ್ತು 'ಯುಗಾಂತ' ಎಂಬ ನಾಟಕತ್ರಿವಳಿಯ ಎರಡನೆಯ ಕೃತಿ 'ಕೊಳ'; ಕೆ.ಆರ್. ನಂದಿನಿ ಮತ್ತು ಪ್ರಶಾಂತ್ ಅವರಿಂದ ಈ ನಾಟಕವು ಕನ್ನಡೀಕರಿಸಲ್ಪಟ್ಟಿದೆ. ಈ ತ್ರಿವಳಿಯು ಕೇಂದ್ರೀಕರಿಸುವುದು ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದ ಧರಣಗಾಂವ್‌ಕರ್ ದೇಶಪಾಂಡೆಯವರ ಕೂಡುಕುಟುಂಬವೊಂದರ ಏಳುಬೀಳುಗಳನ್ನು ಕುರಿತು; ಅಂಥ ಏಳುಬೀಳುಗಳ ನಡುವೆ ಬಿಗಡಾಯಿಸುವ ಸಂಬಂಧದ ತೊಡಕುಗಳೂ ಸಾಮಾಜಿಕ ಸಂಘರ್ಷಗಳೂ ಭಾವನಾತ್ಮಕ ತಿಕ್ಕಾಟಗಳೂ ಈ ನಾಟಕದ ವಸ್ತು.

'ವಾಡಾ ಚಿರೇಬಂದಿ' ನಾಟಕದ ಹತ್ತು ವರ್ಷಗಳ ಅನಂತರದ ಕಥೆಯನ್ನು ಈ ಕೃತಿ ಮುನ್ನಡೆಸುತ್ತದೆ; ಹಿಂದಿನ ನಾಟಕದಲ್ಲಿ ಈ ವಾಡೆಯ ಮತ್ತು ಇಂಥ ಜೀವನಕ್ರಮದ ಪತನದ ಕಥೆಯನ್ನು ಕಾಣಿಸಲಾಗಿದ್ದರೆ, ಇಲ್ಲಿ ಸ್ಥಿತಿ ಸುಧಾರಿಸಿದಂತೆ ಕಾಣುತ್ತಿದೆ; ವಾಡೆಯನ್ನು ಅಪ್ಪಿಪ್ಪು ರಿಪೇರಿ ಮಾಡಿಸಲಾಗಿದೆ. ಆದರೆ ಪಾತ್ರ-ಸನ್ನಿವೇಶಗಳ ಅಂತರಂಗದಲ್ಲಿ ಪತನ ಮುಂದುವರಯುತ್ತಲೇ ಇದೆ; ಮನೆತನದ ಹಿರಿಯನಾದ ಭಾಸ್ಕರನ ಮಗ ಪರಾಗ ಮರಮಟ್ಟುಗಳ ಕಳ್ಳಸಾಗಣೆದಾರರ ಜತೆಗೂಡಿ ಹಣ ಮಾಡಿಕೊಂಡಿದ್ದಾನೆ. ಒಂದೆಡೆ ಭಾಸ್ಕರನ ಮಕ್ಕಳಿಬ್ಬರ ಮದುವೆಯ ಸಿದ್ಧತೆ ಆರಂಭವಾಗಿದೆ; ಆ ಮದುವೆಯ ಸಂದರ್ಭಕ್ಕೆ ಮುಂಬಯಿಯಲ್ಲಿ ನೆಲೆಸಿರುವ ಅವನ ತಮ್ಮ ಸುಧೀರನ ಕುಟುಂಬ ಬರುತ್ತದೆ. ಮತ್ತು ಅದರ ಜತೆಜತೆಗೇ, ಪರಾಗನ ವಿವಾಹೇತರ ಸಂಬಂಧ, ಹೊಸ ತಲೆಮಾರಿನ ಇಬ್ಬರು ಯುವಕರ ನಡುವಿನ ಭಿನ್ನಮತ – ಮೊದಲಾಗಿ ಹಲವು ಘಟನೆಗಳು ಈ ನಾಟಕದ ಸಂಘರ್ಷಗಳನ್ನು ಕಟ್ಟುತ್ತ ಹೋಗುತ್ತವೆ. ಆಧುನಿಕ ಮರಾಠಿಯ ಇಂಥ ಮಹತ್ಕೃತಿಯೊಂದನ್ನು ಕನ್ನಡದ ವೃತ್ತಿಪರ ನಟನಟಿಯರ ಸಹಯೋಗದಲ್ಲಿ ಪ್ರಸ್ತುತಗೊಳಿಸುವ ವಿಶಿಷ್ಟ ಪ್ರಯತ್ನ ಈ ಪ್ರಯೋಗದಲ್ಲಿದೆ.

ಆಹ್ವಾನಿತ ನಾಟಕ



೬-೧೦
ಮಧ್ಯಾಹ್ನದ ಕಾರ್ಯಕ್ರಮಗಳು

೬ ಅಕ್ಟೋಬರ್ - ಮಧ್ಯಾಹ್ನ ೨.೩೦ - ಅರ್ಬನ್ ಫೋಕ್ ಪ್ರಾಜೆಕ್ಟ್ಸ್
ಯಲ್ಲಮ್ಮ ಕಥೆಗಳು
ಉತ್ತರ ಕರ್ನಾಟಕದ ಜೋಗತಿ ಸಂಪ್ರದಾಯದ ಹಾಡು ಮತ್ತು ಕಥನಗಳನ್ನು ಇಟ್ಟುಕೊಂಡು, ಅದರ ಮೂಲಕ ಈ ಸಂಪ್ರದಾಯವನ್ನೂ ಅದರ ಆಂತರಿಕ ಸಂಘರ್ಷಗಳನ್ನೂ ಸಂವಹಿಸುವ ಒಂದು ಕಥನ-ಗಾಯನ ಪ್ರಯೋಗ.

೭ ಅಕ್ಟೋಬರ್ - ಮಧ್ಯಾಹ್ನ ೨.೩೦ - ಕಿರುನಾಟಕ (ಹಿಂದಿ)
ನಾರಿಬಾಯಿ
ಮುಂಬಯಿಯ ಪ್ರಸಿದ್ಧ ನಟಿ ಸುಷ್ಮಿತಾ ಮುಖರ್ಜಿ ಪ್ರಸ್ತುತಪಡಿಸುವ ವಿಕವ್ಯಕ್ತಿ ಪ್ರಯೋಗ. ಮೇಲುವರ್ಗದ ಬರಹಗಾರ್ತಿಯೊಬ್ಬಳು ಬಂದೇಲಖಂಡದ ಬಡ ವೇಶ್ಯೆಯೊಬ್ಬಳನ್ನು ಮುಖಾಮುಖಿಯಾದಾಗ ಬಿಚ್ಚಿಕೊಳ್ಳುತ್ತಹೋಗುವ ಕಥನ.

೮ ಅಕ್ಟೋಬರ್ - ಮಧ್ಯಾಹ್ನ ೨.೩೦ - ಆಟಮಾಟ ತಂಡದ ಕಥಾಪ್ರಸ್ತುತಿ
ಮೋಹನ ಸ್ವಾಮಿ
ಮಹಾದೇವ ಹಡಪದ ರೂಪಿಸಿರುವ ಈ ಕಿರುಪ್ರಯೋಗವು ವಸುಧೇಂದ್ರ ಅವರ ಕೆಲವು ಕಥನಗಳ ಸಂಯೋಜನೆ; ಸಲಿಂಗಕಾಮಿ ಜಗತ್ತಿನ ಮಾನಸಿಕ ತಲ್ಲಣಗಳನ್ನು ಅನಾವರಣಗೊಳಿಸುವ ಪ್ರಯತ್ನ ಈ ಪ್ರಯೋಗದಲ್ಲಿದೆ.

೯ ಅಕ್ಟೋಬರ್ - ಮಧ್ಯಾಹ್ನ ೨.೩೦ - ಥಿಯೇಟರ್ ಸಮುರಾಯ್ ನಾಟಕ
ಮದುವೆ ಹೆಣ್ಣು
ಅಸ್ಮಾಮಿನ ನಿರ್ದೇಶಕ ಪವಿತ್ರ ರಾಭಾ ಅವರು ರೂಪಿಸಿದ ಎಚ್. ಎಸ್. ಶಿವಪ್ರಕಾಶ್ ಅವರ ನಾಟಕವನ್ನಾಧರಿಸಿದ ಕಿರು ರಂಗಪ್ರಯೋಗ.

೧೦ ಅಕ್ಟೋಬರ್ - ಮಧ್ಯಾಹ್ನ ೨.೩೦
ವಾಕ್
ದೆಹಲಿಯ ಪ್ರಸಿದ್ಧ ನಟಿ ಮತ್ತು ರಂಗಶಿಕ್ಷಕಿ ಮಾಯಾ ಕೃಷ್ಣರಾವ್ ಅವರು ರೂಪಿಸಿದ ಒಂದು ಅಸಾಂಪ್ರದಾಯಿಕ ರಂಗಪ್ರಸ್ತುತಿ.

೬-೧೦
ಹಗಲಿನ ಕಾರ್ಯಕ್ರಮಗಳು

ಈ ಶಿಬಿರದಲ್ಲಿ ಕರ್ನಾಟಕ ಮತ್ತು ಹೊರಗಿನ ಹಲವು ಪ್ರಮುಖರು ಸಂಪನ್ಮೂಲ ವ್ಯಕ್ತಿಗಳಾಗಿಯೂ ಮತ್ತು ಕರ್ನಾಟಕದ ವಿವಿಧ ಭಾಗಗಳ ಸುಮಾರು ೧೫೦ ಅಭ್ಯರ್ಥಿಗಳು ಶಿಬಿರಾರ್ಥಿಗಳಾಗಿಯೂ ಭಾಗವಹಿಸುತ್ತಾರೆ. ಪ್ರತಿದಿನ ಬೆಳಿಗ್ಗೆ ೯.೩೦ರಿಂದ ಸಂಜೆ ೬ರವರೆಗೆ ನಡೆಯುವ ಹಗಲಿನ ಕಾರ್ಯಕ್ರಮಗಳಲ್ಲಿ ಉಪನ್ಯಾಸ ಪ್ರಾತ್ಯಕ್ಷಿಕೆಗಳೂ ಸಂವಾದ-ಚರ್ಚೆಗಳೂ ನಡೆಯುತ್ತವೆ. ಈ ಬಾರಿಯ ಶಿಬಿರವು 'ಶಿಕ್ಷಣದಲ್ಲಿ ಕಲಿಕೆಯ ಬಿಕ್ಕಟ್ಟು' ಎಂಬ ವಿಷಯವನ್ನು ಕುರಿತು ಕೇಂದ್ರೀಕರಿಸುತ್ತದೆ. ಇವತ್ತು ನಾವು 'ಶಿಕ್ಷಣ'ವೆಂದು ಕರೆಯುತ್ತಿರುವ ವಲಯದಲ್ಲಿ 'ಕಲಿಕೆ' ಸಾಧ್ಯವಾಗುತ್ತಿಲ್ಲವೆ? ಎಂಬೊಂದು ಪ್ರಶ್ನೆಯು – ಪ್ರಾಥಮಿಕ ಶಾಲೆಗಳು ಮಕ್ಕಳ ಮನೋವಿಕಾಸ ಮಾಡಿಸುತ್ತಿಲ್ಲ ಎಂಬಲ್ಲಿಂದ ಆರಂಭಿಸಿ, ಉನ್ನತ ಶಿಕ್ಷಣದಲ್ಲಿ ಹೊಸ ಜ್ಞಾನವು ಸೃಷ್ಟಿಯಾಗುತ್ತಿಲ್ಲ ಎಂಬಲ್ಲಿಯವರೆಗೆ – ಬೇರೆಬೇರೆ ಮಜಲುಗಳಲ್ಲಿ ಚರ್ಚೆಯಾಗುತ್ತಿದೆ. ಈ ಪ್ರಶ್ನೆಯ ಹಿನ್ನೆಲೆಯಲ್ಲಿ ಸಮಾಜ-ಸಂಸ್ಕೃತಿಯ ವಿಭಿನ್ನ ವಲಯಗಳಲ್ಲಿ ಈಗಾಗಲೇ ಇರುವ ಮತ್ತು ಇರಬಹುದಾದ ಕಲಿಕೆಯ ಅಸಾಂಪ್ರದಾಯಿಕ ಸಾಧ್ಯತೆಗಳನ್ನು ಅನಾವರಣಗೊಳಿಸುವ ಪ್ರಯತ್ನವನ್ನು ಈ ಶಿಬಿರವು ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಗಳ ಮೂಲಕ ನಡೆಸಲಿದೆ. ಶಿಬಿರದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಅತಿಥಿಗಳ ಪಟ್ಟಿ ಹೀಗಿದೆ:

ತ್ರಿದೀಪ್ ಸುಹೃದ್, ಕ್ಲಾಡ್ ಆಳ್ವಾರೆಸ್, ನಾರ್ಮಾ ಆಳ್ವಾರೆಸ್, ಸಮೀಕ್ ಬಂದೋಪಾಧ್ಯಾಯ, ಚಂದ್ರಶೇಖರ ಕಂಬಾರ, ಗೋಪಾಲ ಗುರು, ಪ್ರಕಾಶ ಅಮ್ಟೆ, ಸುಂದರ ಸರುಕ್ಕೈ, ಪ್ರಥ್ವೀದತ್ತ ಚಂದ್ರಶೋಭಿ, ಅತುಲ್ ತಿವಾರಿ, ವಿವೇಕ ಶಾನಭೋಗ, ಎಂ.ಎಸ್. ಶ್ರೀರಾಮ್, ಜಿ.ಎಸ್. ಜಯದೇವ, ಸಂಜೀವ ಕುಲಕರ್ಣಿ, ಕೃಷ್ಣಮೂರ್ತಿ ಹನೂರು, ಸುಕನ್ಯಾ ರಾಮಗೋಪಾಲ್, ಶಿವಾನಂದ ಕೆರೆಮನೆ, ಸದಾನಂದ ಮಯ್ಯ, ಶಿವಾನಂದ ಕಳವೆ, ವೈದೇಹಿ, ದೀಪಾ ಗಣೇಶ್, ಎನ್.ಎಸ್. ಗುಂಡೂರ್, ಜಯರಾಮ ಪಾಟೀಲ – ಮೊದಲಾದವರು.

Supported by

ISTAR Skill Development Pvt. Ltd., Bangalore

Ujjivan Small Finance Bank, Bangalore

Prajavani, Bangalore

Karnataka Bank Ltd., Mangalore

Sahitya Akademi, NewDelhi

Rishabh Ventures, Mysore